ಶ್ರೀ ಜಗದೀಶ್ ಶೆಟ್ಟರ್:– ರೋಷನ್ ಬೇಗ್ ಅವರ ಮೇಲೆ ಕೇಸ್ ಹಾಕುವುದ ಒಗ್ಗೆ ಏನು ಮಾಡುತ್ತೀರಿ? ಅವರ ಮೇಲೆ ಕೇಸ್ ಹಾಕುತ್ತೀರೊ ಇಲ್ಲವೋ? ಅವರ ಬ್ಯಾಂಕ್ ಅಕೌಂಟ್ಸ್ ಸೀಜ್ ಮಾಡುತ್ತೀರೋ ಇಲ್ಲವೋ ಅವರ ಪ್ರಾಪರ್ಟಿ ಸೀಜ್ ಮಾಡುತ್ತೀರೋ ಇಲ್ಲವೋ ಇದನ್ನು ಹೇಳಿ. ಅದರ ಬಗ್ಗೆ ಏನೂ ಹೇಳುವುದಕ್ಕೆ ತಯಾರಿಲ್ಲ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:– ಮಾನ್ಯ ಅಧ್ಯಕ್ಷರೆ, ನಾನು ಅವರು ಕೇಳಿದ ಪ್ರಶ್ನೆಗೇ ಉತ್ತರ ಹೇಳುತ್ತಿದ್ದೇನೆ.

(ಗೊಂದಲ)

4) ಮಂತ್ರಿಗಳ ಹೇಳಿಕೆ

ವಿಷಯ:– ನಕಲಿ ಛಾಪಾ ಕಾಗದ ಹಗರಣ ವಾಸ್ತವಾಂಶಗಳು

ಶ್ರೀ ಡಿ.ಬಿ. ಚಂದ್ರೇಗೌಡ::– ಕಂಡಿಕೆ ಸಂಖ್ಯೆ 29ಕ್ಕೆ ತಿದ್ದುಪಡಿ ಕೊಡುತ್ತಿದ್ದೇನೆ. ಮಾನ್ಯ ಸಿಂಧ್ಯರವರು ಎದ್ದು ನಿಂತಿದ್ದಾರೆ, ಮಾನ್ಯ ಸೋಮಶೇಖರ್‌ರವರ ಪ್ರಶ್ನೆಗೆ ನಾನು ಉತ್ತರ ಹೇಳುತ್ತಿದ್ದೇನೆ.

MR. SPEAKER:- I have allowed Mr.P.G.R. Sindhiya, ನಿಮ್ಮ ನಾಯಕರು ಮಾತನಾಡುವಾಗ ಅವರು ಹಾಗೆ ಗಲಾಟೆ ಮಾಡಿದರಾ?

ಶ್ರೀ ಡಿ.ಬಿ. ಚಂದ್ರೇಗೌಡ:– ತಿದ್ದುಪಡಿಯನ್ನು ಓದುತ್ತೇನೆ Correstion

(ಗೊಂದಲ)

"ಮೇಲ್ಕಂಡ ಹೊತ್ತಿಗೆಯಲ್ಲಿ ಪುಟ 14ರಲ್ಲಿ ಮುದ್ರಿತವಾಗಿರುವ ಕಂಡಿಕೆ ಸಂಖ್ಯೆ 29 ಅನ್ನು ಕೆಳಕಂಡಂತೆ ಓದಿಕೊಳ್ಳುವುದು:

(ಗೊಂದಲ)

29. ಜೈಲಿನಲ್ಲಿ ಬಂಧಿತರಾಗಿರುವ ಅಬ್ದುಲ್ ಕರೀಂ ಲಾಡ್‌ಸಾಬ್ ತೆಲಗಿ ಮತ್ತವನ ಸಹಚರರು ತಮ್ಮ ನಕಲಿ ಛಾಪಾ ಕಾಗದ ವ್ಯವಹಾರವನ್ನು ಮುಂದುವರೆಸುತ್ತಿದ್ದರು. ನಂಬಲರ್ಹ ಮಾಹಿತಿಗಳಂತೆ ಈತನ ತಂಡದವರು ಛಂಡೀಗರ್, ಚೆನ್ನೈ, ದೆಹಲಿ, ಹೈದರಾಬಾದ್, ಮುಂಬೈ, ಹಾಗೂ ರಾಷ್ಟ್ರದ ಇತರೆ ಪ್ರದೇಶಗಳಲ್ಲಿ ಹರಡಿ ಹೋಗಿದ್ದಾರೆ. ಈತ ಜೈಲಿನಲ್ಲಿದ್ದುಕೊಂಡೇ ಮೊಬೈಲ್ ಫೋನ್‌ಗಳ ಮೂಲಕ ತನ್ನ ಸಹಚರರ ನೆರವಿನೊಂದಿಗೆ ನಕಲಿ ಛಾಪಾ ಕಾಗದದ ಚಲಾವಣೆಯನ್ನು ಮುಂದುವರೆಸುತ್ತಿದ್ದ This is a correction to para 29 ತಿದ್ದುಪಡಿ ಅಂಗೀಕರಿಸಲ್ಪಟ್ಟಿತು.

MR. SPEAKER:- I cannot tolerate this kind of attitude.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೇ, ಅಲ್ಲಿ ಸ್ವಲ್ಪ ಮಿಸ್ಟೇಕ್ ಆದುದನ್ನು ರೆಕ್ಟಿಫೈ ಮಾಡಲು ಕೊಟ್ಟಿತ್ತು. ಅದನ್ನು ದಯಮಾಡಿ ತಾವು ಪ್ರೆಸ್ ಮತ್ತು ಎಲ್ಲರಿಗೂ ಹೇಳಿದರೆ ಸರಿಹೋಗುತ್ತದೆ.

ಅಧ್ಯಕ್ಷರು:– ಆಯಿತು ತಾವು ತಂದ ತಿದ್ದುಪಡಿಯನ್ನು ಸೇರಿಸಲಾಗಿದೆ ಎಲ್ಲರಿಗೂ ಅದನ್ನು ಹಂಚಿಕೆ ಮಾಡಲಾಗಿದೆ. ಎಲ್ಲ ಸದಸ್ಯರಿಗೂ ಹಂಚಲಾಗುತ್ತದೆ.